ಇದ್ದರೂ ಮೇ ಎಂಡ್‌ರವರೆಗೆ ಬೇಸಿಗೆ ಇರುವುದರಿಂದ ಗುಂಡಿಗಳನ್ನು ಮುಚ್ಚುವುದಕ್ಕೆ ಸಾಧ್ಯವಾಗುತ್ತದೆ. ಆದರೂ ಮಾರ್ಚ್ ಎಂಡ್‌ಒಳಗೆ ಈ ಕಾರ್ಯಕ್ರಮವನ್ನು ಮಾಡಬೇಕೆಂದು ಸಂಬಂಧಪಟ್ಟ ಎಲ್ಲಾ ಇಂಜಿನಿಯರ್‌ಗಳಿಗೆ ಆದೇಶವನ್ನು ಕೊಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅಂತಹದು ತೊಂದರೆ ಆಗಿದ್ದರೆ ಅದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಅದನ್ನು ಸರಿ ಮಾಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಗಮನಿಸಬೇಕು. ನನಗೆ ತುಂಬಾ ಸಂತೋಷವಾಯಿತು. ಹತ್ತಿರ ಹತ್ತಿರ ಸುಮಾರು ಐದೂವರೆ ಕೋಟಿ ರೂಪಾಯಿಯನ್ನು ನಮ್ಮ ಜಿಲ್ಲೆಗೆ ಬಿಡುಗಡೆ ಮಾಡಿದ್ದಾರೆ. ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಈ ಐದೂವರೆ ಕೋಟಿ ರೂಪಾಯಿ ಹಾಗಾದರೆ ಎಲ್ಲಿಗೆ ಹೋಯಿತು ? ಏಳು ತಾಲ್ಲೂಕಿನಲ್ಲಿ ಹತ್ತಿರ ಹತ್ತಿರ 70 ರಿಂದ 80 ಲಕ್ಷ ರೂಪಾಯಿಗಳು ಪ್ರತಿ ಒಂದು ಅಸ್ಸೆಂಬ್ಲಿ ಕ್ಷೇತ್ರಕ್ಕೆ ಬಿಡುಗಡೆ ಆಗಿದೆ. ಒಂದೂ ಗುಂಡಿ ಮುಚ್ಚಿಲ್ಲ. ಯಾವ ರಸ್ತೆಯೂ ಓಡಾಡುವ ಸ್ಥಿತಿಯಲ್ಲಿಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿರುವುದು, ನಿಜಕ್ಕೂ ಹಣ ಬಿಡುಗಡೆ ಆಗಿದ್ದರೆ ಇಲ್ಲೆಲ್ಲಿಯೂ ದುರಪಯೋಗ ಎಂದು ಅನಿಸುತ್ತದೆ. ದಯವಿಟ್ಟು ಇದರ ಬಗ್ಗೆ ಒಂದು ತನಿಖೆಯಾದರೂ ಮಾಡಿಸಿ. ಇಷ್ಟೊಂದು ಕಷ್ಟಪಟ್ಟು ನೀವು ಐದೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿರುವಂತಹ ಸಂದರ್ಭದಲ್ಲಿ ಒಂದೂ ತಾಲ್ಲೂಕಿನಲ್ಲಿ ಈ ರೀತಿ ಕೆಲಸ ಆಗಿಲ್ಲದೇ ಇರುವಂತಹ ಸಂದರ್ಭದಲ್ಲಿ ಮಾನ್ಯ ಜ್ಞಾನೇಂದ್ರ ಅವರು ತಿಳಿಸಿದ ಹಾಗೆ ಎಲ್ಲಾ ಕಡೆ ಗುಂಡಿ ಇದೆ. ಟಾರ್ ಇಲ್ಲ ಎಂದು ಹೇಳುತ್ತಾರೆ. ಮತ್ತೊಂದು ಇಲ್ಲ ಎಂದು ಹೇಳುತ್ತಾರೆ. ಕೆಲಸ ಮಾಡಿಸಿ ಎಂದು ಹೇಳಿದರೆ ಎಲ್‌ಓಸಿ ಬಂದಿಲ್ಲ ಎಂದು ಹೇಳುತ್ತಾರೆ. ಹಣ ಬಿಡುಗಡೆಯೂ ಆಗಿದೆ. ಹಾಗಾದರೆ ಇದನ್ನು ಎನ್‌ಕ್ವೈರಿ ಆದರೂ ಮಾಡಿ ತಪ್ಪಿತಸ್ಥರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಟೋಟಲ್ ಆಗಿ 5 ಕೋಟಿ 60 ಲಕ್ಷ ರೂಪಾಯಿಯಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅವರು ಹೇಳಿದ ಹಾಗೆ ಪ್ರತಿ ತಾಲ್ಲೂಕಿಗೆ 80 ಲಕ್ಷ ರೂಪಾಯಿಯಷ್ಟು ಹಣ ಹೋಗುತ್ತದೆ. ಆದರೆ ಈ ಗುಂಡಿ ತುಂಬುವ ಕಾರ್ಯಕ್ರಮದಲ್ಲಿ ನಮಗೆ ಟಾರ್ ಸರಿಯಾಗಿ ಸರಬರಾಜು ಆಗುತ್ತಿಲ್ಲ. ಈಗ ಎಲ್ಲಾ ರಾಜ್ಯದಿಂದಲೂ ಬೇಡಿಕೆ ಹೆಚ್ಚಾಗಿರುವುದರಿಂದ ಸರಿಯಾಗಿ ಟಾರ್ ಸಿಕ್ಕದೇ ಇರುವುದರಿಂದ ತೊಂದರೆ ಆಗಿರಬಹುದು. ಆದರೂ ತಮಗೆ ಏನಾದರೂ ದುರುಪಯೋಗ ಆಗಿದೆ ಎಂದು ಅನಿಸಿದರೆ ಇದರ ಬಗ್ಗೆ ಸರಿಯಾದ ತನಿಖೆ ನಡೆಸಿ ಕ್ರಮ ಕೈಗೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿನ ರಸ್ತೆಗಳ ಡಾಂಬರೀಕರಣ

125(869) ಶ್ರೀ ವಸಂತ ವಿ.ಸಾಲಿಯಾನ (ಕಾಪು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) 1998-99ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖಾ ಅಧೀನದಲ್ಲಿರುವ ರಸ್ತೆಗಳ ಅಭಿವೃದ್ಧಿಗಾಗಿ ಡಾಂಬರೀಕರಣಕ್ಕಾಗಿ ಒದಗಿಸಲಾದ ಹಣ ಎಷ್ಟು ?

(ಆ) ಇದರಲ್ಲಿ ಖರ್ಚು ಮಾಡಲಾದ ಹಣ ಎಷ್ಟು ಹಾಗೂ ಅಭಿವೃದ್ಧಿಗೊಳಿಸಿದ ರಸ್ತೆಗಳ ಸಂಖ್ಯೆ ಎಷ್ಟು ?

ಶ್ರೀ ಉಮೇಶ್ ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) 1998-99ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆ ಅಧೀನದಲ್ಲಿ ಬರುವ ರಸ್ತೆಗಳಾದ ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆಗಳಿಗೆ ನೀಡಲಾದ ಅನುದಾನ.

1) ಯೋಜನೆ - 22.20 ಕೋಟಿ ರೂ.

2) ಯೋಜನೇತರ - 118.21 ಕೋಟಿ ರೂ.

ಆ) ಇದರಲ್ಲಿ ವೆಚ್ಚ ಮಾಡಿದ ಹಣ (1.99ರ ಅಂತ್ಯಕ್ಕೆ)

1) ಯೋಜನೆ - 14.50 ಕೋಟಿ ರೂ.

2) ಯೋಜನೇತರ - 86.60 ಕೋಟಿ ರೂ.

ಯೋಜನೆ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಿದ ರಸ್ತೆಗಳ ಉದ್ದ 208.00 ಕಿ.ಮೀ (1.99ರ ಅಂತ್ಯಕ್ಕೆ)

ಯೋಜನೇತರ ಅನುದಾನದಲ್ಲಿ ವಾರ್ಷಿಕ ನಿರ್ವಹಣೆ ಗುಂಡಿ ಮುಚ್ಚುವ ಕೆಲಸ, ವಿಶೇಷ ದುರಸ್ತಿಯ ಕಾರ್ಯಕ್ರಮಗಳನ್ನು ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಮಾಡಲಾಗುತ್ತಿದೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಬಹಳಷ್ಟು ಕನ್‌ಫ್ಯೂಷನ್ ಇದೆ. ನಾನು ಪ್ರಶ್ನೆ ಕೇಳಿರುವುದು 1998ರಲ್ಲಿ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಮಾಡಿದ್ದಾರೆ ಎಂದು ಕೇಳಿದ್ದೇನೆ. ಎಷ್ಟು ಹಣ ಒದಗಿಸುತ್ತಾರೆಂದು ಕೇಳಿದ್ದೇನೆ. ಆದರಲ್ಲಿ ಉತ್ತರದಲ್ಲಿ ಏನು ಇದೆ ಎಂದರೆ - ಒಂದು ರಾಜ್ಯದ ಹೆದ್ದಾರಿಗೆ 22 ಕೋಟಿ 22 ಲಕ್ಷ ರೂಪಾಯಿ ಗಳನ್ನು ಇಟ್ಟಿದ್ದಾರೆ. ಮತ್ತು ಜಿಲ್ಲಾ ಮುಖ್ಯ ರಸ್ತೆಗಳಿಗೆ 118.21 ಕೋಟಿ ರೂಪಾಯಿ ಇಟ್ಟಿದ್ದಾರೆ. ಆದರಲ್ಲಿ ರಸ್ತೆ ರಿಪೇರಿಗೆ ಒಂದು ಸಬ್ಜೆಕ್ಟ್ ಇದೆ ಮತ್ತು ಹೊಸ ರಸ್ತೆಗಳಿಗೆ ಡಾಂಬರೀಕರಣ ಮಾಡುವಂತಹ ವಿಚಾರದ ಸಹ ಇದೆ. ಆದ್ದರಿಂದ ನನಗೆ ಕಾಣಿಸುವುದು ಏನೆಂದರೆ ಇವರು ಗುಂಡಿ ಮುಚ್ಚಿಸುವಂತಹ ಕಾರ್ಯಕ್ರಮದ ಬಗ್ಗೆ ಮಾತ್ರ ಇವರು ಉತ್ತರವನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಎಷ್ಟು ರೂಪಾಯಿ ಖರ್ಚು ಮಾಡಿದ್ದೀರಿ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಒಂದನೇ ಯೋಜನೆಯಲ್ಲಿ ಹೆದ್ದಾರಿಗೆ 14 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಅದೇ ರೀತಿಯಲ್ಲಿ ಎರಡನೇ ಯೋಜನೆಯಾದ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ 86 ಕೋಟಿ 60 ಲಕ್ಷ ರೂಪಾಯಿಗಳೆಂದು ಹೇಳಿದ್ದಾರೆ. ಆದರೆ ಇದು ಸರಿಯಾದ ಉತ್ತರ ಇಲ್ಲ. ನಾನು ಕೇಳಿದ್ದು ಗುಂಡಿ ಮುಚ್ಚುವ ವಿಚಾರ ಅಲ್ಲ. ಹೊಸ ರಸ್ತೆಗಳಿಗೆ ಡಾಂಬರೀಕರಣವನ್ನು ಕಳೆದ ಮೂರು ವರ್ಷಗಳಿಂದ ಎಂಎಲ್‌ಎ ಕ್ಷೇತ್ರದಲ್ಲಿ ಆಗಿಲ್ಲ. ನನ್ನ ಕ್ಷೇತ್ರದಲ್ಲಿ ಅಂತೂ ಆಗಲೇ ಇಲ್ಲ. ರಾಜ್ಯದ ಉಳಿದ ಎಷ್ಟು ಕ್ಷೇತ್ರದಲ್ಲಿ ಖರ್ಚು ಮಾಡಿದ್ದೀರಿ ? ಎಂಎಲ್‌ಎ ಅನುದಾನದಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ ? ಅದು ಸರಿಯಾದ ಉತ್ತರ ಇಲ್ಲ. ಒಟ್ಟಿಗೆ 208 ಕಿಲೋಮೀಟರ್ ರಸ್ತೆಯ ಅಭಿವೃದ್ಧಿ ಮಾಡಿದ್ದೇವೆಂದು ತಾವು ಹೇಳಿದ್ದೀರಿ. ಯಾವ್ಯಾವ ರಸ್ತೆಗಳನ್ನು ಅಭಿವೃದ್ಧಿ ಮಾಡಿದ್ದೀರಿ ಎಂಬ ಬಗ್ಗೆ ಜಿಲ್ಲಾವಾರು ಮಾಹಿತಿ ಕೊಡಬೇಕು. ಎಷ್ಟು ಹಣ ಖರ್ಚು ಮಾಡಿದ್ದಿರಿ ಎಂಬ ಮಾಹಿತಿ ಕೂಡಬೇಕು ಮತ್ತೆ ನಿಮಗೆ ಅಭಿವೃದ್ಧಿ ಮಾಡಲಿಕ್ಕೆ ಒಂದು ಬ್ಯಾರೆಲ್ ಡಾಂಬರ ಇಲ್ಲ ರಾಜ್ಯದಲ್ಲಿ ನೀವು ಎಲ್ಲಿಂದ ಅಭಿವೃದ್ಧಿ ಮಾಡುತ್ತೀರಿ ಗುಂಡಿ ಮುಚ್ಚಲಿಕ್ಕೆ ಸಹ ನಿಮ್ಮ ಹತ್ತಿರ ಡಾಂಬರ್ ಇಲ್ಲ. ಹಣ ಎಲ್ಲಿ ಹೋಗಿದೆ? ನೀವು ಇಷ್ಟೆಲ್ಲಾ ಹಣ ಇಟ್ಟಿದ್ದೀರಿ, ಅದು ಎಲ್ಲಿಗೆ ಹೋಗಿದೆ ಎಂಬ ಬಗ್ಗೆ ತಾವು ದಯಮಾಡಿ ತಿಳಿಸಬೇಕು.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಾಲಿಯಾನ ಅವರು 1998-99ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖಾ ಅಧೀನದಲ್ಲಿರುವ ರಸ್ತೆಗಳ ಅಭಿವೃದ್ಧಿಗಾಗಿ ಡಾಂಬರೀಕರಣಕ್ಕಾಗಿ ಒದಗಿಸಲಾದ ಹಣ ಎಷ್ಟು ಎಂದು ಪ್ರಶ್ನೆ ಕೇಳಿದ್ದಾರೆ. ಇಲ್ಲಿ ನಾವು ಹೆಡ್‌ವೈಸ್-ಪ್ಲಾನ್ ಹಾಗೂ ನಾನ್ ಪ್ಲಾನ್‌ವೈಸ್ ಮಾಹಿತಿ ಕೊಟ್ಟಿದ್ದೇವೆ. ಇಲ್ಲಿಯವರೆಗೆ ಅದಕ್ಕೆ ಖರ್ಚಾಗಿರುವಂತಹ ಹಣ ಎಷ್ಟು ಎಂದು ಕೇಳಿದ್ದಾರೆ. ಯೋಜನೆಯಲ್ಲಿ 14.50 ಕೋಟಿ ರೂಪಾಯಿ ಹಾಗೂ ಯೋಜನೇತರದಲ್ಲಿ 86.60 ಕೋಟಿ ರೂಪಾಯಿ ಈ ರೀತಿ ಖರ್ಚು ಮಾಡಿದ್ದೇವೆಂದು ಹೇಳಿದ್ದೇನೆ. ಈ ರಾಜ್ಯದಲ್ಲಿ 40 ಸಾವಿರದಷ್ಟು ಮೇಜರ್ ಡಿಸ್ಟ್ರಿಕ್ಟ್ ರೋಡ್‌ಗಳಲ್ಲಿ 28 ಸಾವಿರ ಕಿಲೋಮೀಟರ್‌ನಷ್ಟು ಸ್ಟೇಟ್ ಹೈವೈಸ್, 11 ಸಾವಿರ ಕಿಲೋ ಮೀಟರ್‌ನಷ್ಟು ನ್ಯಾಷನಲ್ ಹೈವೇ, ನಮ್ಮ ಇಲಾಖೆಗೆ ಬರುತ್ತಿದ್ದು ಆದರಲ್ಲಿ ರೀ ಕಾರ್ಪೆಟಿಂಗ್ ಮತ್ತು ಗುಂಡಿ ತುಂಬುವ ಕೆಲಸಕ್ಕೆ ಸಾಧಾರಣವಾಗಿ ಈ ಲೋಕೋಪಯೋಗಿ ಇಲಾಖೆಗೆ ಬರುವಂತಹ ರಸ್ತೆಗಳಲ್ಲಿ ಮೆಜಾರಿಟಿಯಾಗಿ ಎಲ್ಲಾ ಡಾಂಬರೀಕರಣವಾದಂತಹ ರಸ್ತೆಗಳು ಇವೆ. ಅದರಲ್ಲಿ ಗುಂಡಿ ತುಂಬುವುದಾಗಲೀ ಅಥವಾ ರೀಕಾರ್ಪೆಟ್ ಮಾಡುವಂತಹ ಕಾರ್ಯಕ್ರಮಗಳನ್ನು ನಮ್ಮ ಇಲಾಖೆಯ ವತಿಯಿಂದ ಹಾಕುತ್ತೇವೆ. ಆ ದಿಸೆಯಲ್ಲಿ ನಾನು ಖರ್ಚು ಮಾಡಿರುವಂತಹ ಹಣದ ಮಾಹಿತಿಯನ್ನು ಒದಗಿಸಿದ್ದೇವೆ. ಮತ್ತು ಈ ಕಾರ್ಯಕ್ರಮವನ್ನು ನಾವು ಜನವರಿಯಿಂದ ಪ್ರಾರಂಭ ಮಾಡುವಂತಹದು. ಸಾಮಾನ್ಯವಾಗಿ ಜನವರಿಯಲ್ಲಿ ಖರ್ಚು ಜಾಸ್ತಿ ಆಗುತ್ತದೆ. ಏಕೆಂದರೆ ಮಳೆಗಾಲ ಇರುವುದರಿಂದ ರೀಕಾರ್ಪೆಟಿಂಗ್ ಮಾಡುವುದಕ್ಕೆ ಆಗುವುದಿಲ್ಲ. ಇಂತಿಷ್ಟು ಲೆಂಗ್ ಎಂದು ಕೇಳಿದ್ದಾರೆ. ಯೋಜನೆಯಲ್ಲಿ 208 ಕಿಲೋ ಮೀಟರ್ ರಸ್ತೆ ರೀ ಕಾರ್ಪೆಟಿಂಗ್ ಮಾಡಿದ್ದೇವೆಂದು ಹೇಳಿದ್ದೇವೆ. ಯೋಜನೇತರದಲ್ಲಿ ಪಾರ್ಟ್ ಪಾರ್ಟ್ ನಾವು ಮಾಡುವುದರಿಂದ ಅದರ ಬಗ್ಗೆ ಕಿಲೋ ಮೀಟರ್ ವೈಸ್ ಮಾಹಿತಿ ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳಿದ್ದೇನೆ. ಆದರೂ ಅವರ ಜಿಲ್ಲೆಯಲ್ಲಿ ಎಷ್ಟು ರಸ್ತೆಯನ್ನು ಮಾಡಿದ್ದೇವೆ ಎಂಬ ಬಗ್ಗೆ ಮಾಹಿತಿ ತರಿಸಿ ಮಾನ್ಯ ಸದಸ್ಯರಿಗೆ ತಲುಪಿಸುವಂತಹ ವ್ಯವಸ್ಥೆ ಮಾಡುತ್ತೇನೆಂದು ತಮ್ಮ ಮುಖೇನ ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ : ನಾನು ಕೇಳಿದ ಪ್ರಶ್ನೆಯಲ್ಲಿ ಎರಡು ಸಬ್ಜೆಕ್ಟ್ ಇದೆ. ಅದನ್ನು ತಾವು ಸರಿಯಾಗಿ ಅರ್ಥ ಮಾಡಿಕೊಳ್ಳಿ. ಒಂದು ವಿಷಯ ಅಂದರೆ ಗುಂಡಿ ಮುಚ್ಚುವ ಕಾರ್ಯಕ್ರಮ. ಮತ್ತು ರಸ್ತೆಗಳಿಗೆ ಡಾಂಬರೀಕರಣ ಮಾಡುವುದು. ರಸ್ತೆಗಳಿಗೆ ಡಾಂಬರೀಕರಣ ಮಾಡುವ ಬಗ್ಗೆ ತಾವು ಏನೂ ಪ್ರಸ್ತಾವನೆ ಇಲ್ಲಿ ಮಾಡಲಿಲ್ಲ. ಗುಂಡಿ ಮುಚ್ಚುವ ಬಗ್ಗೆ ಮಾತ್ರ ತಾವು ಇಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಕಳೆದ ಮೂರು ವರ್ಷದಿಂದ ಪ್ರತಿ ಒಂದು ಎಂಎಲ್‌ಎ ಕ್ಷೇತ್ರಕ್ಕೆ 40 ಲಕ್ಷ ರೂಪಾಯಿ ಕೊಡುತ್ತೇವೆಂದು ಸರ್ಕಾರ ಹೇಳಿತ್ತು. ಹಣವನ್ನು ತಾವು ಎಲ್ಲಿ ಖರ್ಚು ಮಾಡಿದ್ದೀರಿ ? ತಾವು ಜಿಲ್ಲಾವಾರು ಖರ್ಚು ಮಾಡಿರುವ ಬಗ್ಗೆ ಮಾಹಿತಿ ತಿಳಿಸಿ. ನನ್ನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷದಲ್ಲಿ ಲೋಕೋಪಯೋಗಿ ರಸ್ತೆಗೆ ಡಾಂಬರೀಕರಣ ಮಾಡಲಿಲ್ಲ. ನಾನು ಕೊಟ್ಟಂತಹ ಲಿಸ್ಟ್ ಹಾಗೆಯೇ ಇದೆ. ಗುಂಡಿ ಮುಚ್ಚಿಸುತ್ತೀರಿ ತಾವು. ಒಬ್ಬ ಲೋಕೋಪಯೋಗಿ ಇಲಾಖೆಯ ಗುತ್ತಿಗೆದಾರರಿಗೆ ಒಂದು ಪೈಸೆ ಹಣ ಪಾವತಿ ಮಾಡಲಿಲ್ಲ. ಹೊಸ ವರ್ಕ್ ತೆಗೆದುಕೊಳ್ಳುವುದಕ್ಕೆ ಅವರು ಮುಂದೆ ಬರುತ್ತಿಲ್ಲ. ಆದ್ದರಿಂದ ಏನಾಗಿದೆ, ಎಂಎಲ್‌ಎ ಕ್ಷೇತ್ರದ ರಸ್ತೆಗಳಿವೆ ಡಾಂಬರೀಕರಣ ಮಾಡಲು, ಒಂದು ರಸ್ತೆಗೂ ಸಹ ಡಾಂಬರೀಕರಣ ಆಗಿಲ್ಲ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಲೋಕೋಪಯೋಗಿ ಇಲಾಖೆಯಲ್ಲಿ ಬರುವಂತಹ ರಸ್ತೆಗಳಲ್ಲಿ ಮೆಜಾರಿಟಿ ಟಾರ್ ರೋಡ್‌ಗಳಿವೆ. ಆದರೆ ಗುಂಡಿ

ತುಂಬುವುದು ಮತ್ತು ರೀಕಾರ್ಪೆಂಟಿಂಗ್ ಮಾಡುವುದು. ಕೆಲವು ಭಾಗಗಳಲ್ಲಿ ರೀಕಾರ್ಪೆಟಿಂಗ್ ಮಾಡುತ್ತೇವೆ. ಇನ್ನು ಹೊಸದಾಗಿ 50 ಕಿಲೋ ಮೀಟರ್ ಪ್ರತಿ ವಿಧಾನ ಸಭಾ ಕ್ಷೇತ್ರದಿಂದ, ಲೋಕೋಪಯೋಗಿ ಇಲಾಖೆ ತೆಗೆದುಕೊಳ್ಳತಕ್ಕ, ನಬಾರ್ಡ್ ರಸ್ತೆ ಯೋಜನೆಯಲ್ಲಿ ಆ ರಸ್ತೆಗಳನ್ನು ಹೊಸದಾಗಿ ನಿರ್ಮಾಣ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ದಿಸೆಯಲ್ಲಿ ಇಷ್ಟೊಂದು ಹಣವನ್ನು ಖರ್ಚು ಮಾಡಿ ಈ ರಾಜ್ಯದ ರಸ್ತೆಗಳ ದುರಸ್ತಿ ಆಗಿರುವುದು ಮತ್ತು ಅದರ ಮೇಂಟೆನೆನ್ಸ್ ತೆಗೆದುಕೊಳ್ಳುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ತಮ್ಮ ಮುಖೇನ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಡಾಂಬರೀಕರಣ ಆಗಲಿಲ್ಲ. ಕಳೆದ ಮೂರು ವರ್ಷದಿಂದ ನಾವು ಪ್ರತಿ ಒಂದು ವರ್ಷಕ್ಕೆ ಇಂತಿಷ್ಟು ರಸ್ತೆಗೆ ಇಂತಿಷ್ಟು ಕಿಲೋ ಮೀಟರ್ ಡಾಂಬರೀಕರಣ ಮಾಡಬೇಕೆಂದು ಮನವಿಯನ್ನು ಮುಂಚಿನ ಮಂತ್ರಿಗಳಿಗೆ ಕೊಟ್ಟಿದ್ದೇವೆ. ಇಷ್ಟರವರೆಗೆ ಒಂದು ಕಿಲೋ ಮೀಟರ್‌ವರೆಗೆ ಡಾಂಬರೀಕರಣ ಆಗಿಲ್ಲ ಎಂಬ ಪ್ರಸ್ತಾವನೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಈ ಮಾತನ್ನು ಬಹಳ ದುಃಖದಿಂದ ಹೇಳುತ್ತಿದ್ದೇನೆ. ಕಳೆದ ಮೂರು ವರ್ಷಗಳಿಂದ ಹೊಸ ರಸ್ತೆಗಳಿಗೆ, ಅದೂ ಲೋಕೋಪಯೋಗಿ ಇಲಾಖೆಯ ರಸ್ತೆಗಳು, ಅದಕ್ಕೆ ಡಾಂಬರೀಕರಣ ಮಾಡಲಿಲ್ಲ. ಅದಕ್ಕೆ ನಾನು ಹೇಳುತ್ತಿರುವುದು. ನನ್ನ ಜನರು ಅಲ್ಲಿ ಕಲ್ಲು ಎಸೆಯುತ್ತಿದ್ದಾರೆ. ಸಾರ್ವಜನಿಕ ಹತ್ತಿರ ನಾವು ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ : ಪ್ಲಾನ್‌ನ ಬಜೆಟೆಡ್‌ನಲ್ಲಿ ನಾವು ಹೊಸದಾಗಿ ರಸ್ತೆಗಳನ್ನು ನಿರ್ಮಾಣ ಮಾಡುವಲ್ಲಿ 208 ಕಿಲೋ ಮೀಟರ್‌ನಷ್ಟು ರಸ್ತೆಯನ್ನು ಮಾಡಿದ್ದೇವೆಂದು ಹೇಳಿದ್ದೇವೆ. ಇನ್ನು ನಾನ್ ಪ್ಲಾನ್‌ನಲ್ಲಿ ರೀಕಾರ್ಪೆಟಿಂಗ್ ಮಾಡಲು ಅರ್ಧ ದುಡ್ಡನ್ನು ರಿನ್ಯೂವಲ್‌ಗೋಸ್ಕರ, ಇದ್ದಂತಹ ರಸ್ತೆಗಳನ್ನು ರೀಕಾರ್ಪೆಟಿಂಗ್ ಮಾಡುವುದು, ಇನ್ನು ಅರ್ಧ ದುಡ್ಡಿನಲ್ಲಿ ಗುಂಡಿಗಳನ್ನು ಮುಚ್ಚುವುದು ಅಥವಾ ಬದಿಗಳನ್ನು ತುಂಬುವಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಆ ದಿಸೆಯಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಪರ್ಟಿಕ್ಯುಲರ್ ಆಗಿ ಆ ರಸ್ತೆ ಆಗಿಲ್ಲ ಎಂದು ಕೇಳಿದರೆ ನಾನು ರಾಜ್ಯಾದಂತ ಬೇರೆ ಪ್ರಶ್ನೆಗೆ ಉತ್ತರ ಒದಗಿಸುತ್ತಿದ್ದೇವೆ. ಪರ್ಟಿಕ್ಯುಲರ್ ಆಗಿ ಅವರ ಕ್ಷೇತ್ರದಲ್ಲಿ ಎಷ್ಟೆಷ್ಟು ಮಾಡಿದ್ದೀರಿ ಎಂಬ ಬಗ್ಗೆ ನಾನು ಸರಿಯಾದ ಮಾಹಿತಿಯನ್ನು ತರಿಸಿ ಅವರಿಗೆ ಕೊಡುವಂತಹ ವ್ಯವಸ್ಥೆ ಮಾಡುತ್ತೇನೆಂದು ತಮ್ಮ ಮೂಲಕ ಹೇಳಲು ಇಷ್ಟಪಡುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಆನೆ ತುಳಿತದಿಂದ ಸತ್ತವರಿಗೆ ಪರಿಹಾರ

126 (681) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಕಳೆದ 3 ವರ್ಷಗಳಲ್ಲಿ ಕೊಡಗು ಜಿಲ್ಲೆಯಲ್ಲಿ ಆನೆ ತುಳಿತದಿಂದ ಸತ್ತವರ ಸಂಖ್ಯೆ ಎಷ್ಟು ?

2) ಅದರಿಂದ ಆಸ್ತಿಪಾಸ್ತಿಗೆ ಆದ ನಷ್ಟ ಎಷ್ಟು ; ಆ ಬಗ್ಗೆ ಪರಿಹಾರ ಕೊಡಲಾಗಿದೆಯೇ ಹಾಗಿದ್ದಲ್ಲಿ ಆ ತಾಲ್ಲೂಕುಗಳ ವಿವರ ನೀಡುವುದು.

3) ಆನೆಗಳು ಅರಣ್ಯದಿಂದ ಊರಿನೊಳಗೆ ಬರುವುದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?